# ಅವಳಿಗೆಂದು...

‘ಅವಳಿಗೆಂದು ಬರೆದ ಅಕ್ಷರಗಳ ರಾಶಿಯನ್ನು
ಮುಚ್ಚಿಡುತ್ತೇನೆ.
ಅವಳು ಓದಿಕೊಳ್ಳುತ್ತಾಳೆ.
ದೇವರು ನನ್ನ ಪ್ರಾರ್ಥನೆಗಳನ್ನು
ಓದಿಕೊಂಡ ಹಾಗೆ.


ಅವಳಿಗೆಂದು ಕೂಗಿ ಹೇಳಿದ ಸಾಲು ಮಾತುಗಳು
ಗಂಟಲಲ್ಲೇ ಮಾಯವಾಗುತ್ತವೆ.
ಅವಳು ಕೇಳಿಸಿಕೊಳ್ಳುತ್ತಾಳೆ.
ದೇವರು ನನ್ನ ಮೌನವನ್ನು
ಕೇಳಿಸಿಕೊಂಡ ಹಾಗೆ.

ಅವಳಿಗೆಂದು ತಂದ ತಿನಿಸು, ಬಟ್ಟೆ, ಚಿಟ್ಟೆ,
ಬಳೆ ಗೆಜ್ಜೆಗಳನ್ನು ಕೊಡುವುದೇ ಇಲ್ಲ.
ನಾನು ತಂದಿದ್ದೇನೆಂದು ಅವಳಾಗೇ ತಿಳಿದು
ಖುಷಿ ಪಡುತ್ತಾಳೆ.
ಇಟ್ಟ ನೈವೇದ್ಯವನು ದೇವರು
ಪಡೆದುಕೊಂಡ ಹಾಗೆ.

ದೇವರೇ,
ನಿನ್ನ ಪೂಜೆಗಾಗಿ ಹಲವು ಹಂಬಲಿಸುತ್ತೇನೆ;
ಆದರ ಕಾರ್ಯರೂಪ ನನ್ನಿಂದಾಗದೇ ಹೋದರೂ.
ನಿನಗೆ ಗೊತ್ತಲ್ಲ ?
ನನ್ನ ಸಂಕಲ್ಪ ಶುದ್ಧತನ.
ಕದ್ದು ಹಣ್ಣು ತಿಂದದ್ದು ಕಾಣುತ್ತದೆ ಅಂತಾದರೆ
ಕದ್ದು ಮಾಡಿದ ಇವೆಲ್ಲವೂ ಕಾಣಬೇಕಲ್ಲಾ...
ಕಣ್ಣುಬಿಡು!’

ಹೌದು, ನಿಮಗಿದು ತಮಾಷೆಯಾಗಿ ಕಾಣಬಹುದು...
ಆದರೆ ನನಗೆ ಪ್ರೇಮ!

● ಗಣಪತಿ ದಿವಾಣ



ವಾಗೀಶ ಹೆಗಡೆ